Reg. No. : ....................................

Name : ..........................................

**SY-06**

## SECOND YEAR HIGHER SECONDARY EXAMINATION, MARCH 2022

Part – II

**KANNADA**

Maximum : 80 Scores

Time : **2½** Hours

Cool-off time : **15** Minutes

ವಿದ್ಯಾರ್ಥಿಗಳಿಗೆ ಸೂಚನೆಗಳು :

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

### PART-I

### A

**(1 ರಿಂದ 6 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ) (4 × 1 = 4)**

1. ಕಾಯಕ – ಈ ಪದದ ಅರ್ಥವನ್ನು ಬರೆಯಿರಿ.
2. ಕೃತಕಾಗ್ನಿ – ಈ ಪದವನ್ನು ವಿಂಗಡಿಸಿ ಬರೆಯಿರಿ.
3. ಸೂರ್ಯ – ಇದರ ಎರಡು ಪರ್ಯಾಯ ಪದಗಳನ್ನು ಬರೆಯಿರಿ.
4. ಮುಖ – ಈ ಪದದ ತದ್ಭವ ರೂಪವನ್ನು ಬರೆಯಿರಿ.
5. ಅವನು ಸುಂದರವಾದ ದೃಶ್ಯವನ್ನು ನೋಡಿದನು. ಅಡಿಗೆರೆ ಎಳೆದ ಪದದ ನಿಷೇದಾರ್ಥ ರೂಪವನ್ನು ಬರೆಯಿರಿ.
6. ಪುಲಿಗೆರೆ ಸೋಮ ಕವಿಯ ಪದ್ಯಗಳಲ್ಲಿ ಕಂಡುಬರುವ ಅಂಕಿತ ಯಾವುದು ?

### B

**(7 ರಿಂದ 10 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ) (4 × 1 = 4)**

7. ಊರ್ಮಿಳಾ – ಕವನವನ್ನು ಬರೆದವರು ಯಾರು ?
   (ಕುವೆಂಪು, ರೂಪಾ ಹಾಸನ, ಕಯ್ಯಾರ ಕಿಂಞಣ್ಣ ರೈ, ದ.ರಾ. ಬೇಂದ್ರೆ)
8. ನೆರೆ ಪಾಠವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ ?
   (ಕತೆ, ಕಾದಂಬರಿ, ಪ್ರಬಂಧ, ವಿಮರ್ಶೆ)

9. ಕೆಳಗೆ ಕೊಟ್ಟಿರುವವುಗಳಲ್ಲಿ ಅನ್ಯದೇಶೀಯ ಪದ ಯಾವುದು ?

(ನೆಲ, ಬಯಲು, ಪೇಪರು, ಮನೆ)

10. ಸಾಹಸಭೀಮವಿಜಯಂ – ಇದು ಯಾರ ಕೃತಿ ?

(ರಾಘವಾಂಕ, ರನ್ನ, ನಂಜುಂಡ ಕವಿ, ಪುಲಿಗೆರೆ ಸೋಮನಾಥ)

## PART-II

### A

**(11 ರಿಂದ 15 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ.) (3 × 2 = 6)**

11. ಪರಿಸರ ಸಂರಕ್ಷಣೆಯ ಮಹತ್ವವನ್ನು ಸಾರುವ ಎರಡು ಘೋಷಣಾ ವಾಕ್ಯಗಳನ್ನು ಸಿದ್ಧಪಡಿಸಿರಿ.

12. ಕೆಳಗೆ ನೀಡಲಾದ ತ್ರಿಪದಿಯ ಸಾರಾಂಶವನ್ನು ಬರೆಯಿರಿ.

ಅರಿಯದೆಸಗಿದ ಪಾಪ ಅರಿತರದು ತನಗೊಳಿತು

ಅರಿತರಿತು ಮಾಡಿ ಮರೆತರದು – ನಯನವನು

ಇರಿದುಕೊಂಡಂತೆ ಸರ್ವಜ್ಞ

13. ಕೆಳಗೆ ಕೊಟ್ಟಿರುವ ವಾಕ್ಯದಲ್ಲಿ ಅಡಿಗೆರೆ ಎಳೆದ ಪದಗಳ ವಿಭಕ್ತಿಯನ್ನು ಹೆಸರಿಸಿರಿ.

ಸುಬ್ಬಣ್ಣನಲ್ಲಿ ಆದ ಬದಲಾವಣೆಯನ್ನು ವೆಂಕಟರಮಣನು ಅದಾಗಲೇ ಗುರುತಿಸಿಕೊಂಡಿದ್ದನು.

14. ಕೆಳಗೆ ನೀಡಲಾದ ಮಿಶ್ರವಾಕ್ಯವನ್ನು ಮೂರು ಸರಳ ವಾಕ್ಯಗಳಾಗಿ ಪರಿವರ್ತಿಸಿ ಬರೆಯಿರಿ.

ರಮೇಶನು ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದುದಕ್ಕೆ ಖುಷಿಪಟ್ಟು ಸಹಪಾಠಿಗಳಿಗೆ ಸಿಹಿತಿಂಡಿಯನ್ನು ಹಂಚಿದನು.

15. ಬಡವರು ಕೂಡಾ ಕಾಲ ಕಳೆದಂತೆ ಶ್ರೀಮಂತರಾಗಬಹುದು ಎಂಬುದನ್ನು ಪುಲಿಗೆರೆಯ ಸೋಮನಾಥನು ತನ್ನ ಶತಕದಲ್ಲಿ ಯಾವ ಉದಾಹರಣೆಗಳ ಮೂಲಕ ಹೇಳಿದ್ದಾನೆ ? ತಿಳಿಸಿರಿ.

### B

**(16 ರಿಂದ 18 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ) (2 × 2 = 4)**

16. ನಂಜುಂಡ ಕವಿಯು ಕನ್ನಡ ನಾಡಿನ ನದಿಗಳು ಹೇಗಿವೆ ಎಂದು ವರ್ಣಿಸಿದ್ದಾನೆ ? ಬರೆಯಿರಿ.

17. ಮನಸ್ಸಿದ್ದರೆ ಮಾರ್ಗ – ಈ ಗಾದೆ ಮಾತಿನ ಆಶಯ ವಿಸ್ತರಿಸಿ ಬರೆಯಿರಿ.

18. ನೆನಪಿದೆಯೇ ಪಿಯರ್ ರೇಡಿಯಂಗೆ ಸುಂದರ ಬಣ್ಣವಿರಬೇಕೆಂದು – ನೀರವ ರಾತ್ರಿಯ ಮಾಯಾಲೋಕ ಪಾಠದಲ್ಲಿ ಬಂದಿರುವ ಈ ಮಾತಿನ ಸಂದರ್ಭವನ್ನು ತಿಳಿಸಿರಿ.

## PART-III

### A

**(19 ರಿಂದ 23 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ) (3 × 4 = 12)**

19. ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಆಗದು ಎಂದು | ರೂಪಾ ಹಾಸನ |
| ಸುಬ್ಬಣ್ಣ | ಆರ್.ಎನ್. ಜಯಗೋಪಾಲ್ |
| ತಾಯಿ | ಮಾಸ್ತಿ ವೆಂಕಟೇಶ ಅಯ್ಯಂಗಾರ್ |
| ಅಪ್ಪನೂ ಒಲೆಯುರಿಯೂ | ಯು.ಆರ್. ಅನಂತಮೂರ್ತಿ |

20. ಅಪ್ಪನು ಒಲೆ ಉರಿಸಲು ಮಾಡುವ ಸಿದ್ಧತೆಯನ್ನು ಕವಯತ್ರಿ ಹೇಗೆ ನಿರೂಪಿಸಿದ್ದಾರೆ ? ಬರೆಯಿರಿ.

21. ಕೊರೊನ ರೋಗವು ಇತ್ತೀಚೆಗೆ ಎಲ್ಲೆಡೆ ವ್ಯಾಪಿಸುತ್ತಿದೆ. ಇದನ್ನು ತಡೆಯುವುದಕ್ಕಾಗಿ ಜನ ಜಾಗೃತಿ ಮೂಡಿಸಲು ಸೂಕ್ತವಾದ ಕರಪತ್ರವೊಂದನ್ನು ಸಿದ್ಧಪಡಿಸಿರಿ.

22. ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು ಕಾವ್ಯಭಾಗದಲ್ಲಿ ವ್ಯಕ್ತವಾದ ಚಂದ್ರಮತಿಯ ತ್ಯಾಗಮನೋಭಾವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

23. ಸಂಗೀತದ ಮೇಲಿನ ಪ್ರೀತಿಯೇ ಸುಬ್ಬಣ್ಣನನ್ನು ಪುನಃ ಪ್ರಾಪಂಚಿಕ ಜೀವನಕ್ಕೆ ಮರಳುವಂತೆ ಮಾಡಿತೇ ? ಸುಬ್ಬಣ್ಣ ಪಾಠದ ಆಧಾರದಲ್ಲಿ ವಿವರಿಸಿರಿ.

### B

**(24 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿರಿ.) (1 × 4 = 4)**

24. ಕೆಳಗೆ ನೀಡಲಾದ ಆಂಗ್ಲ ಭಾಷೆಯ ಗದ್ಯ ಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ.

Hot summer days remind me of my childhood in a little village. There was a large Banyan tree right in the middle of the village and I would spend many hours playing under it during my holidays. The tree was like a massive umbrella with its branches providing much needed shade.

(Summer Day : ಬೇಸಗೆ ಕಾಲ, Banyan Tree : ಆಲದ ಮರ, Massive : ಬೃಹತ್ ಗಾತ್ರದ, Branches : ಕೊಂಬೆಗಳು, Shade : ನೆರಳು)

25. ಪ್ರಾಣಿಗಳ ಮೇಲಿನ ಮನುಷ್ಯರ ನಿರ್ಲಕ್ಷ್ಯ ಮನೋಭಾವ ನೆರೆ ಕಥೆಯಲ್ಲಿ ಹೇಗೆ ವ್ಯಕ್ತವಾಗಿದೆ ? ತಿಳಿಸಿರಿ.

## PART-IV

### A

**(26 ರಿಂದ 29 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ) (3 × 6 = 18)**

26. ಆಗದು ಎಂದು ಪದ್ಯವು ಸಾರುವ ಸಂದೇಶವೇನು ? ಬರೆಯಿರಿ.

27. ಓಟುರುಕ ಆಮೆಯ ರಕ್ಷಣಾ ತಂತ್ರವನ್ನು ಕೆರೆಯ ದಡದಲ್ಲಿ ಪಾಠದಲ್ಲಿ ಲೇಖಕರು ಹೇಗೆ ಸ್ವಾರಸ್ಯಕರವಾಗಿ ವಿವರಿಸಿದ್ದಾರೆ ? ಬರೆಯಿರಿ.

28. ಸೋಲಾರು, ಗೀಸರು, ವಾಷಿಂಗ್ ಮೆಷೀನು ಮೊದಲಾದ ಮನೆಯಲ್ಲಿ ಬಳಸುವ ಆಧುನಿಕ ಯಂತ್ರಸಾಮಗ್ರಿಗಳು ನಿತ್ಯಜೀವನದಲ್ಲುಂಟುಮಾಡುವ ಒಳಿತು ಕೆಡುಕುಗಳ ಕುರಿತು ನಿಮ್ಮ ಅನಿಸಿಕೆಗಳನ್ನು ಬರೆಯಿರಿ.

29. ಕೆಳಗೆ ನೀಡಲಾದ ವಚನ ಹಾಗೂ ಕವನದ ಭಾಗದ ಆಶಯಗಳನ್ನು ಹೋಲಿಸಿ ತುಲನಾತ್ಮಕ ಟಿಪ್ಪಣಿ ಬರೆಯಿರಿ.

    ಅನ್ನ ದೇವರ ಮುಂದೆ ಇನ್ನು ದೇವರು ಉಂಟೆ
    ಅನ್ನವಿರುವ ತನಕ ಪ್ರಾಣವು – ಜಗಕೆಲ್ಲ
    ಅನ್ನವೇ ದೈವ ಸರ್ವಜ್ಞ

### B

**(30 ರಿಂದ 32 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ) (2 × 6 = 12)**

30. ಒಂದು ಚಲನಚಿತ್ರದ ಯಶಸ್ಸಿಗೆ ಕಾರಣವಾಗುವ ಅಂಶಗಳನ್ನು ವಿವರಿಸಿಕೊಂಡು ಕಿರುಲೇಖನವೊಂದನ್ನು ಬರೆಯಿರಿ.

31. ಪಾಂಡವರೊಂದಿಗೆ ಸಂಧಿಗೆ ಒಪ್ಪಬೇಕೆಂದು ಧೃತರಾಷ್ಟ್ರ ಗಾಂಧಾರಿಯರು ದುರ್ಯೋಧನನಲ್ಲಿ ಕೇಳಿಕೊಂಡಾಗ ಅವನು ತನ್ನ ಮನಸ್ಸಿನ ನೋವನ್ನು ಯಾವ ರೀತಿ ವ್ಯಕ್ತಪಡಿಸಿದನು ? ಬರೆಯಿರಿ.

32. ಕಿರುತೆರೆಯ ಪ್ರಭಾವದಿಂದ ಸಿನಿಮಾದ ಜನಪ್ರಿಯತೆ ಕುಗ್ಗುತ್ತಿದೆಯೇ ? ನಿಮ್ಮ ಅಭಿಪ್ರಾಯಗಳೊಂದಿಗೆ ಸಮರ್ಥಿಸಿರಿ.

## PART-V

### A

**(33 ರಿಂದ 35 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ) (2 × 8 = 16)**

33. ಸುಬ್ಬಣ್ಣ ಕಿರು ಕಾದಂಬರಿಯಲ್ಲಿ ಬರುವ ಕೇಂದ್ರ ಪಾತ್ರವಾದ ಸುಬ್ಬಣ್ಣನ ಪಾತ್ರ ಚಿತ್ರಣ ಮಾಡಿರಿ.

34. ವಿಶ್ವಾಮಿತ್ರನು ಸೃಷ್ಟಿಸಿದ ಕಾಡ್ಗಿಚ್ಚಿನಿಂದ ಚಂದ್ರಮತಿಯು ತನ್ನ ಪತಿ,ಸುತ, ಮಂತ್ರಿಯನ್ನು ರಕ್ಷಿಸಿದ ಸನ್ನಿವೇಶವು ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು ಈ ಕಾವ್ಯಭಾಗದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ ಬರೆಯಿರಿ.

35. ಅವರವರ ದಾರಿ – ಈ ಕವನದ ಆಶಯವನ್ನು ಬರೆಯಿರಿ.